ನರೇಂದ್ರ ಪೈ

# ಸಮಕಾಲೀನ ಸತ್ಯಗಳಿಗೆ ಇತಿಹಾಸದ ಲೇಪ

ಇತಿಹಾಸವನ್ನು ಹಿಂದಿರುಗಿ ನೋಡುವ ಮನುಷ್ಯನ ಬಯಕೆಗೆ ತುಂಬ ಅರ್ಥವಿದೆ. ಬುದ್ಧಿ ತಿಳಿದಾಗಿನಿಂದ ಅವನು ನಿರಂತರವಾಗಿ ತನಗೆ ದತ್ತವಾದ ಬದುಕನ್ನು, ಮನಸ್ಸು ಮತ್ತು ಮನುಷ್ಯ ಎನ್ನುವ ವೈಚಿತ್ರ್ಯ ಸುಲಭದ ವ್ಯಾಖ್ಯಾನಗಳಿಗೆ ಸಿಲುಕುವಂಥದ್ದಲ್ಲ ಎಂದು ತಿಳಿದೂ ಅರ್ಥ ಮಾಡಿಕೊಳ್ಳಲು ಹೆಣಗುತ್ತಲೇ ಬಂದಿದ್ದಾನೆ. ಕತೆಗಾರ, ಪ್ರಬಂಧಕಾರ ವಸುಧೇಂದ್ರ ಅವರ ಎರಡನೆಯ ಕಾದಂಬರಿ 'ತೇಜೋ ತುಂಗಭದ್ರಾ'ದ ಭಿತ್ತಿಯಲ್ಲಿ ಹದಿನೈದನೆಯ ಶತಮಾನದ ಕೊನೆಯಿಂದ ಹದಿನಾರನೆಯ ಶತಮಾನದ ಆದಿಭಾಗ ಇದೆ. ಆ ಕಾಲದ ಲಿಸ್ಬನ್, ವಿಜಯನಗರ ಮತ್ತು ಗೋವಾ ಈ ಕಾದಂಬರಿಯ ಕಥಾಕ್ಷೇತ್ರ. ಹಾಗಾಗಿ ಆ ಕಾಲ–ದೇಶದ ಜನಜೀವನ, ರೀತಿ–ನೀತಿ, ಕಾಯ್ದೆ ಕಟ್ಟಳೆ, ಗಡಿ–ಭಾಷೆ–ನದಿ–ನೆಲ, ವೃತ್ತಿ–ಪ್ರವೃತ್ತಿ, ಧರ್ಮ–ಕರ್ಮ ಸಂಯೋಗದಂಥ ಹತ್ತು ಹಲವು ಸಂಗತಿಗಳು ಇಲ್ಲಿ ಬರುವುದು ಅನಿವಾರ್ಯ. ಮೂಲತಃ ಹಂಪಿಯ ಸನಿಹದ ಬಳ್ಳಾರಿಯವರಾದ ವಸುಧೇಂದ್ರ




**ತೇಜೋ ತುಂಗಭದ್ರಾ**
ಕಾದಂಬರಿ
ಲೇ: ವಸುಧೇಂದ್ರ
ಪ್ರ: ಛಂದ ಪುಸ್ತಕ,
ಐ–004, ಮಂತ್ರಿ ಪ್ಯಾರಡೈಸ್,
ಬನ್ನೇರುಘಟ್ಟ ರಸ್ತೆ, ಬೆಂಗಳೂರು.

**'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**